ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 778

ಸದಸ್ಯರ ಹೆಸರು : ಶ್ರೀ ಎನ್ ರವಿಕುಮಾರ್

ಉತ್ತರಿಸುವ ಸಚಿವರು : ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸುವ ದಿನಾಂಕ : 15.12.2020

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಬ್ಬನ್ ಪಾರ್ಕ್ ಮತ್ತು ಲಾಲ್ ಬಾಗ್ ಉದ್ಯಾನಗಳಲ್ಲಿ ವಾಹನ ಸಂಚಾರ ಮತ್ತು ನಿಲುಗಡೆ ಸೌಲಭ್ಯವನ್ನು ನೀಡಿರುವುದರಿಂದ ಅಲ್ಲಿರುವ ಪ್ರಾಣಿ ಮತ್ತು ಪಕ್ಷಿಗಳಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಾಹನ ನಿಲುಗಡೆ ಸೌಲಭ್ಯವನ್ನು ರದ್ದುಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು: | ಕಬ್ಬನ್ ಪಾರ್ಕ್ ನ ಒಳಗಿನ ರಸ್ತೆಗಳಲ್ಲಿ ಪ್ರತಿ ಭಾನುವಾರ, ಎರಡನೆಯ ಮತ್ತು ನಾಲ್ಕನೆ ಶನಿವಾರಗಳಂದು, ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ, ಗಾಂಧಿ ಜಯಂತಿ ಹಾಗೂ ಸರ್ಕಾರಿ ಕಛೇರಿಗಳು ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯವಾಗುವ ಸಾಮಾನ್ಯ ಸಾರ್ವತ್ರಿಕ ರಜಾ ದಿನಗಳಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ.<br>ವಾರದ ದಿನಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಹಡ್ಸನ್ ವೃತ್ತದಿಂದ ಹೈಕೋರ್ಟ್ ಮತ್ತು ಕೆಆರ್ ವೃತ್ತದ ಕಡೆಗೆ, ಸಿದ್ಧಲಿಂಗಯ್ಯ ವೃತ್ತದಿಂದ ಹೈಕೋರ್ಟ್ ಮತ್ತು ಕೆಆರ್ ವೃತ್ತದ ಕಡೆಗೆ ಮತ್ತು ಬಾಲಭವನದ ರಸ್ತೆಗಳಲ್ಲಿ ಮಾತ್ರ ವಾಹನ ಸಂಚಾರವಾಗುತ್ತಿದ್ದು ಪ್ರಾಣಿ ಮತ್ತು ಪಕ್ಷಿಗಳಿಗೆ ತೊಂದರೆಯುಂಟಾಗದಂತೆ ಉದ್ಯಾನವನದ ಇತರೇ ಪ್ರದೇಶಗಳಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ.<br>ಕಬ್ಬನ್ ಉದ್ಯಾನವನದಲ್ಲಿ ರಾಣಿ ವಿಕ್ಟೋರಿಯಾ ಪ್ರತಿಮೆಯಿಂದ ರಾಜಾ ಎಡ್ವರ್ಡ್ ಪ್ರತಿಮೆ ಬಳಿ, ರಿಂಗ್ ವುಡ್ ವೃತ್ತದ ಗಜಿಬೋ ಬಳಿ, ಜಾವಾ ರಸ್ತೆ ಬಳಿ, ಕೇಂದ್ರ ಗ್ರಂಥಾಲಯದ ಶೇಷಾದ್ರಿ ವಿಭಾಗದ ಬಳಿ ಮತ್ತು ಎನ್.ಜಿ.ಓ ಗೇಟ್ ಬಳಿ ಮಾತ್ರ ವಾಹನ ನಿಲುಗಡೆ ಸೌಲಭ್ಯವನ್ನು ಕಲ್ಪಿಸಲಾಗಿದೆ.<br>ಲಾಲ್ ಬಾಗ್ ಉದ್ಯಾನವನದಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ, ಸಸ್ಯತೋಟದ ಜೋಡಿ ರಸ್ತೆಯ ಬಳಿ 5 ಎಕರೆ ಪ್ರದೇಶದಲ್ಲಿ ಪ್ರಾಣಿ ಮತ್ತು ಪಕ್ಷಿಗಳಿಗೆ ತೊಂದರೆಯುಂಟಾಗದಂತೆ ಪ್ರತ್ಯೇಕವಾಗಿ ವಾಹನ ನಿಲುಗಡೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಉಳಿದಂತೆ 235 ಎಕರೆಯಲ್ಲಿ ಯಾವುದೇ ನಿಲುಗಡೆ ಸೌಲಭ್ಯ ಇರುವುದಿಲ್ಲ.<br>ವಾಹನ ನಿಲುಗಡೆ ಸೌಲಭ್ಯವನ್ನು ರದ್ದುಗೊಳಿಸುವ ಬಗ್ಗೆ ಸರ್ಕಾರವು ಸಕಾರಾತ್ಮಕ ನಿಲುವನ್ನು ಹೊಂದಿದೆ. |

| | | |
|---|---|---|
| ಆ) | ಕಬ್ಬನ್ ಪಾರ್ಕ್ ಮತ್ತು ಲಾಲ್ ಬಾಗ್ ಗಳಲ್ಲಿ ಅನಧಿಕೃತವಾಗಿ ವಾಣಿಜ್ಯ ಉದ್ದೇಶಗಳಿಗಾಗಿ ಕಟ್ಟಡ ನಿರ್ಮಾಣ ಮಾಡಿದ್ದು ಅವುಗಳನ್ನು ತೆರವುಗೊಳಿಸುವ ಕುರಿತು ಸರ್ಕಾರದ ನಿಲುವೇನು; | ಕಬ್ಬನ್ ಪಾರ್ಕ್ ಮತ್ತು ಲಾಲ್ ಬಾಗ್ ಗಳಲ್ಲಿ ಅನಧಿಕೃತವಾಗಿ ವಾಣಿಜ್ಯ ಉದ್ದೇಶಗಳಿಗಾಗಿ ಯಾವುದೇ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ. |
| ಇ) | ಕಬ್ಬನ್ ಪಾರ್ಕ್ ಮತ್ತು ಲಾಲ್ ಬಾಗ್ ಗಳು ಬೆಂಗಳೂರು ನಗರಕ್ಕೆ ಆಮ್ಲಜನಕ ನೀಡುವ ಮುಖ್ಯ ಭಾಗವಾಗಿದ್ದು ಈ ಪ್ರದೇಶಗಳಲ್ಲಿ ವಾಹನ ಸಂಚಾರ ಮತ್ತು ವಾಣಿಜ್ಯ ವ್ಯವಹಾರಗಳನ್ನು ರದ್ದು ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ಕುರಿತು ಸರ್ಕಾರದ ನಿಲುವೇನು? | ಕಬ್ಬನ್ ಪಾರ್ಕ್ ಮತ್ತು ಲಾಲ್ ಬಾಗ್ ಉದ್ಯಾನಗಳಲ್ಲಿ ವಾಣಿಜ್ಯ ವ್ಯವಹಾರಗಳಿಗೆ ಅವಕಾಶ ಕಲ್ಪಿಸಿರುವುದಿಲ್ಲ.<br>ಲಾಲ್ ಬಾಗ್ ಸಸ್ಯತೋಟದಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ, ಕಬ್ಬನ್ ಉದ್ಯಾನವನದಲ್ಲಿ ಹಂತಹಂತವಾಗಿ ಸಾರ್ವತ್ರಿಕ ರಜಾ ದಿನಗಳಲ್ಲಿ ವಾಹನ ಸಂಚಾರವನ್ನು ನಿಷೇಧಿಸುವ ಕ್ರಮ ಕೈಗ್ಗೊಳ್ಳಲಾಗಿದೆ, ಈ ಕುರಿತು ಸರ್ಕಾರವು ಸಕಾರಾತ್ಮ ನಿಲುವನ್ನು ಹೊಂದಿದೆ. |

ನಂ: HORTI/516 /HGM/2020-admn-Horti-Sec

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ

ಮತ್ತು ರೇಷ್ಮೆ ಸಚಿವರು